# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೪, ಸೆಪ್ಟೆಂಬರ್, ೨೦೨೧ (ಭಾದ್ರಪದ, ೨೩, ಶಕವರ್ಷ, ೧೯೪೩)<br>BENGALURU, TUESDAY, 14, SEPTEMBER, 2021 (BHADRAPADA, 23, SHAKAVARSHA, 1943) | ನಂ. ೭೬೬<br>No. 766 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನೈದನೇ ವಿಧಾನಸಭೆ**

**ಹತ್ತನೇ ಅಧಿವೇಶನ**

## ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2021

**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ–23)**

ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 36) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದ ಮೂಲಕ ಈ ಮುಂದಿನಂತೆ ಅಧಿನಿಯಮಿತವಾಗಲಿ,

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 72ಎ ಪ್ರಕರಣದ ಪ್ರತಿಯೋಜನೆ**.- ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 36) 72ಎ ಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"72ಎ. ಮಳೆ ನೀರು ಕೊಯ್ಲು ರಚನೆಯನ್ನು ಒದಗಿಸುವ ಹೊಣೆಗಾರಿಕೆ.-** (1) 108 ಚದರ ಮೀಟರಿಗಿಂತ ಕಡಿಮೆಯಲ್ಲದ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸುವ ಉದ್ದೇಶವನ್ನು ಹೊಂದಿರುವ ಪ್ರತಿಯೊಬ್ಬ ಮಾಲೀಕನು, ಮಂಡಳಿಯು ಹೊರಡಿಸಿದ ವಿನಿಯಮಗಳು ಮತ್ತು ಮಾರ್ಗಸೂಚಿಗಳಲ್ಲಿ ಉಪಬಂಧಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮಳೆನೀರು ಶೇಖರಣೆಗಾಗಿ, ಬಳಕೆಗಾಗಿ ಅಥವಾ ಅಂತರ್ಜಲ ಪುನರ್ಭರ್ತಿಗಾಗಿ ಮಳೆ ನೀರು ಕೊಯ್ಲು ರಚನೆಯನ್ನು ಒದಗಿಸತಕ್ಕದ್ದು.

(2) 216 ಚದರ ಮೀಟರುಗಳಿಗಿಂತ ಕಡಿಮೆಯಿರದ ಮತ್ತು 1000 ಚದರ ಮೀಟರುಗಳಿಗಿಂತ ಹೆಚ್ಚಲ್ಲದ ನಿವೇಶನ ಪ್ರದೇಶದಲ್ಲಿ ಕಟ್ಟಡವನ್ನು ಹೊಂದಿರುವ ಪ್ರತಿಯೊಬ್ಬ ಮಾಲೀಕ ಅಥವಾ ಅಧಿಭೋಗದಾರನು ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭಕ್ಕೆ ಮೊದಲು ಮಳೆ ನೀರು ಕೊಯ್ಲು ರಚನೆಯನ್ನು ಕಲ್ಪಿಸದಿದ್ದರೆ, ವಿನಿಯಮಗಳಲ್ಲಿ

ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಮಳೆನೀರು ಶೇಖರಣೆಗಾಗಿ, ಬಳಕೆಗಾಗಿ ಅಥವಾ ಅಂತರ್ಜಲ ಪುನರ್ಭರ್ತಿಗಾಗಿ ಮಳೆ ನೀರು ಕೊಯ್ಲು ರಚನೆಯನ್ನು ಒದಗಿಸತಕ್ಕದ್ದು.

(3) ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭಕ್ಕೆ ಮುಂಚೆ ಮಳೆ ನೀರು ಕೊಯ್ಲು ರಚನೆಯನ್ನು ಕಲ್ಪಿಸದಿರುವ 1000 ಚದರ ಮೀಟರುಗಳಿಗಿಂತ ಕಡಿಮೆಯಿರದ ವಿಸ್ತೀರ್ಣದಲ್ಲಿ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿರುವ ಪ್ರತಿಯೊಬ್ಬ ಮಾಲೀಕನು ಅಥವಾ 1000 ಚದರ ಮೀಟರುಗಳಿಗಿಂತ ಕಡಿಮೆಯಿರದ ನಿವೇಶನ ಪ್ರದೇಶದಲ್ಲಿ ಕಟ್ಟಡವನ್ನು ಹೊಂದಿರುವ ಮಾಲೀಕನು ಅಥವಾ ಅಧಿಭೋಗದಾರನು ಛಾವಣಿಯಿಂದ ಬೀಳುವ ಮಳೆ ನೀರು ಸಂಗ್ರಹಣೆಗಾಗಿ ಮತ್ತು ಕುಡಿಯುವುದಕ್ಕೆ, ಅಡಿಗೆಗೆ ಹಾಗೂ ಸ್ನಾನದ ಉದ್ದೇಶಕ್ಕೆ ಹೊರತಾದ ಬಳಕೆಗಾಗಿ ಹಾಗೂ ಕಲ್ಲು ಹಾಸು ಮತ್ತು ಕಲ್ಲು ಹಾಸು ಇಲ್ಲದ ಜಾಗದಿಂದ ಬರುವ ಮಳೆ ನೀರನ್ನು ಅಂತರ್ ಜಲ ಪುನರ್ಭರ್ತಿಗಾಗಿ ಮಂಡಳಿಯು ಹೊರಡಿಸಿದ ವಿನಿಯಮಗಳು ಹಾಗೂ ಮಾರ್ಗಸೂಚಿಗಳಲ್ಲಿ ಉಪಬಂಧಿಸಬಹುದಾದಂಥ ರೀತಿಯಲ್ಲಿ ಹಾಗೂ ಅಂಥ ಷರತ್ತುಗಳಿಗೊಳಪಟ್ಟು ದ್ವಿಕೊಳವೆ ವ್ಯವಸ್ಥೆಯನ್ನು ಹಾಗೂ ಮಳೆ ನೀರು ಕೊಯ್ಲು ರಚನೆಯನ್ನು ಕಲ್ಪಿಸತಕ್ಕದ್ದು.

**ವಿವರಣೆ**: ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಮಳೆ ನೀರು ಕೊಯ್ಲು" ಎಂದರೆ, ಬಳಕೆಗಾಗಿ ಅಥವಾ ಅಂತರ್ಜಲ ಪುನರ್ಭರ್ತಿಗಾಗಿ, ಕಟ್ಟಡದ ಮೇಲ್ಛಾವಣಿಯಿಂದ ಬೀಳುವ ಅಥವಾ ಖಾಲಿ ಭೂಮಿಯಿಂದ ಬರುವ ಮಳೆ ನೀರಿನ ಶೇಖರಣೆ ಮತ್ತು ಸಂಗ್ರಹಣೆ; ಮತ್ತು

(ಬಿ) "ಅಂತರ್ಜಲ ಪುನರ್ಭರ್ತಿ" ಎಂದರೆ, ಕೊಯ್ಲು ಮಾಡಿದ ಮಳೆ ನೀರಿನ ಬಳಕೆಯಿಂದ ತೆರೆದ ಬಾವಿ ಅಥವಾ ಕೊಳವೆಬಾವಿ ಅಥವಾ ಸಂದರ್ಭಾನುಸಾರ, ಅಂತರ್ಜಲ ನೀರಿನ ಮಟ್ಟವನ್ನು ಹೆಚ್ಚಿಸಲು ಪುನರ್ಭರ್ತಿ ಮಾಡುವುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 36) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,-

(i) ಕಾವೇರಿ ನೀರು ಅಥವಾ ಅಂತರ್ಜಲದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು;

(ii) ಮಳೆ ನೀರು ಒಳಚರಂಡಿಗಳಲ್ಲಿ ಹರಿದು ಹೋಗುವುದನ್ನು ತಗ್ಗಿಸುವುದು;

(iii) ನಗರ ಪ್ರವಾಹವನ್ನು ಇಳಿಸುವುದು;

(iv) ಮೇಲ್ಮೈ ಮತ್ತು ಅಂತರ್ಜಲದ ಅಂಚು ರಹಿತ ಮಾಲಿನ್ಯ ಮೂಲವನ್ನು (non-point source pollution) ಕಡಿಮೆಗೊಳಿಸುವುದು;

(v) ಅಂತರ್ಜಲ ಪೂರಣ ಮತ್ತು ಅಂತರ್ಜಲ ಮಟ್ಟ ಅಥವಾ ನೀರುಪೊಟರೆಯ ಮೂಲಕ ಬೇಸಿಗೆಯ ತೀವ್ರ ಬೇಡಿಕೆಯನ್ನು ನಿರ್ವಹಿಸುವುದು;

(vi) ಅಂತರ್ಜಲದ ಗುಣಮಟ್ಟವು ಕಳಪೆಯಾಗಿರುವಲ್ಲಿ, ಮಳೆ ನೀರು ಕೊಯ್ಲಿನ ಮೂಲಕ ಹೊಸದಾದ ನೀರಿನ ಮೂಲವನ್ನು ಕಲ್ಪಿಸುವುದು; ಮತ್ತು

(vii) ಮಳೆನೀರು ಕೋಯ್ಲಿನ ನೀರು ಉಚಿತವಾಗಿದ್ದು, ತಕ್ಷಣವೇ ಲಭ್ಯವಾಗಲಿದ್ದು ಮತ್ತು ಸರಬರಾಜಿನ ವೆಚ್ಚವಿಲ್ಲದಿರುವುದರಿಂದ ಮಳೆನೀರು ಕೊಯ್ಲನ್ನು ಕಡ್ಡಾಯಗೊಳಿಸುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಸವರಾಜ ಬೊಮ್ಮಾಯಿ**
ಮುಖ್ಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 36) ಉದ್ಧೃತ ಭಾಗ

**XX XX XX**

72ಎ. **ಮಳೆ ನೀರು ಕೊಯ್ಲು ರಚನೆಯನ್ನು ಕಲ್ಪಿಸುವ ಹೊಣೆಗಾರಿಕೆ**.– 2400 ಚದರ ಅಡಿಗಳಿಗೆ ಕಡಿಮೆಯಿಲ್ಲದ ನಿವೇಶನ ಪ್ರದೇಶವನ್ನು ಹೊಂದಿರುವ ಕಟ್ಟಡದ ಪ್ರತಿಯೊಬ್ಬ ಮಾಲೀಕನು ಅಥವಾ ಅಧಿಭೋಗದಾರನು ಅಥವಾ 1200 ಚದರ ಅಡಿಗಳಿಗೆ ಕಡಿಮೆಯಿಲ್ಲದ ನಿವೇಶನ ಪ್ರದೇಶದಲ್ಲಿ ಕಟ್ಟಡವನ್ನು ನಿರ್ಮಿಸಬೇಕೆಂದು ಪ್ರಸ್ತಾವಿಸುವ ಪ್ರತಿಯೊಬ್ಬ ಮಾಲೀಕನು, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ದಿನಾಂಕದೊಳಗೆ ಮತ್ತು ಮಂಡಳಿಯು ಹೊರಡಿಸುವ ವಿನಿಯಮಗಳು ಮತ್ತು ಮಾರ್ಗಸೂಚಿಗಳಲ್ಲಿ ಉಪಬಂಧ ಕಲ್ಪಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಬಳಕೆಗಾಗಿ ಅಥವಾ ಅಂತರ್ಜಲ ಮರುಭರ್ತಿ ಸಂಗ್ರಹಣೆಗಾಗಿ, ಮಳೆ ನೀರು ಕೊಯ್ಲಿನ ರಚನೆಯನ್ನು ಕಲ್ಪಿಸತಕ್ಕದ್ದು.

**ವಿವರಣೆ**.– ಈ ಅಧಿನಿಯಮದ ಉದ್ದೇಶಕ್ಕಾಗಿ,–

(ಎ) “ಮಳೆ ನೀರು ಕೊಯ್ಲು” ಎಂದರೆ ಬಳಕೆಗಾಗಿ ಅಥವಾ ಅಂತರ್ಜಲ ಮರುಭರ್ತಿಗಾಗಿ ಒಂದು ಕಟ್ಟಡದ ಮೇಲ್ಛಾವಣಿಯಿಂದ ಅಥವಾ ಖಾಲಿ ಭೂಮಿಯಿಂದ ಮಳೆ ನೀರಿನ ಸಂಗ್ರಹಣೆ ಮಾಡುವುದು ಮತ್ತು ದಾಸ್ತಾನು ಮಾಡುವುದು;

(ಬಿ) “ಮಳೆ ನೀರು ಮರುಭರ್ತಿ” ಎಂದರೆ ಕೊಯ್ಲು ಮಾಡಿದ ಮಳೆ ನೀರಿನ ಬಳಕೆಯಿಂದ, ತೆರೆದ ಬಾವಿ ಅಥವಾ ಸಂದರ್ಭಾನುಸಾರವಾಗಿ ಅಂತರ್ಜಲ ನೀರನ್ನು ಮರುಭರ್ತಿ ಮಾಡುವುದು.

**XX XX XX**

**KARNATAKA LEGISLATIVE ASSEMBLY**

**FIFTEENTH LEGISLATIVE ASSEMBLY**

**TENTH SESSION**

# THE BANGALORE WATER SUPPLY AND SEWERAGE (AMENDMENT) BILL, 2021

## (LA Bill No. 23 of 2021)

A Bill to further amend the Bangalore Water Supply and Sewerage Act, 1964.

Whereas, it is expedient further to amend the Bangalore Water Supply and Sewerage Act, 1964 (Karnataka Act 36 of 1964) for the purposes hereinafter appearing:

Be it enacted by the Karnataka State Legislature in the seventy second year of the Republic of India as follows:-

**1. Short title and commencement.-** (1) This Act may be called the Bangalore Water Supply and Sewerage (Amendment) Act, 2021.

(2) It shall come into force at once.

**2. Substitution of section 72A.-** In the Bangalore Water Supply and Sewerage Act, 1964 (Karnataka Act 36 of 1964) for section 72A, the following shall be substituted, namely:-

"**72A. Obligation to provide rain water harvesting structure.-** (1) Every owner who proposes to construct a building on a sital area of not less than 108 square meter shall provide rain water harvesting structure for storage, for use or for ground water recharge in such manner and subject to such conditions as may be provided in the regulations and guidelines issued by the Board.

(2) Every owner or occupier of a building having sital area of not less than 216 square meter and not more than 1000 square meter, who has not provided rain water harvesting structure before the commencement of the Bangalore Water Supply and Sewerage (Amendment) Act, 2021, shall provide rainwater harvesting structure for storage, for use and for ground water recharge subject to such conditions as may be specified in the regulations.

(3) Every owner who proposes to construct a building on sital area of not less than 1000 square meter or a owner or occupier of a building having sital area of not less than 1000 square meter who has not provided rain water harvesting structure before the commencement of the Bangalore Water Supply and Sewerage (Amendment) Act, 2021 shall provide dual piping system and rain water harvesting structure for storage and for use, other than drinking, cooking and bathing purpose, based on roof area and ground water recharge based on paved and unpaved areas in such manner and subject to such conditions as may be provided in the regulations and guidelines issued by the Board.

**Explanation.-** For the purpose of this section,-

(a) "rain water harvesting" means collection and storage of rain water from roof top of a building or from a vacant land for use or for ground water recharge; and

(b) "ground water recharge" means recharging of open well or the bore well or the underground water as the case may be, by use of harvested rain water."

**STATEMENT OF OBJECTS AND REASONS**

It is considered necessary to amend the Bangalore Water Supply and Sewerage Act, 1964 (Karnataka Act 36 of 1964) in order to,-

(i) reduce the dependency on Cauvery water or underground water;

(ii) reduce the flow of storm water drains;

(iii) mitigate urban flooding;

(iv) reduce non-point source pollution of surface and ground water;

(v) manage the summer peak demand through ground water charging and ground water table or aquifer;

(vi) provide fresh water source through rain water harvesting, where the ground water quality is poor; and

(vii) mandate rain water harvesting as the rain harvested water is free, readily available and has no distribution cost.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**BASAVARAJ BOMMAI**
Chief Minister

**M.K. VISHALAKSHI**
Secretary (I/c)
Karnataka Legislative Assembly

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



# ANNEXTURE

## EXTRACT FROM THE BANGALORE WATER SUPPLY AND SEWERAGE ACT, 1964 (KARNATAKA ACT 36 OF 1964)

**XX** **XX** **XX**

**72A. Obligation to provide for rain water harvesting structure.-** Every owner or occupier of a building having sital area of not less than 2400 square feet or every owner who propose to construct a building on a sital area of not less than 1200 square feet shall provide rain water harvesting structure for storage for use or for ground water recharge within such date as may be notified by the state government in such manner and subject to such conditions as may be provided in the regulations and guidelines issued by the board.

**Explanation.-** for the purpose of this section,-

(a) “rain water harvesting” means collection and storage of rain water from roof top of a building or from a vacant land for use or for ground water recharge; and

(b) “ground water recharge” means recharging of open well or the underground water as the case may be, by use of harvested rain water.

**XX** **XX** **XX**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE Date: 2021.09.15 16:51:39 +05'30'